ದಿನಾಂಕಃ 19.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರವಾಗಿ ಶ್ರೀ ಆರ್.ವಿ. ವಕೀಲರಿಂದಃ**

ನಾನು ಕೂಲಿ ಕೆಲಸವನ್ನು ಊರಿನಲ್ಲಿ ಮಾಡುತ್ತಿದ್ದೇನೆ. ನಾನು ನನ್ನ ತಂದೆಯ ಮನೆಯಲ್ಲಿದ್ದೇನೆ. ಭಾಗದ ಬಗ್ಗೆ ನಾನು ನನ್ನ ಅಣ್ಣ ಮತ್ತು ನನ್ನ ತಂದೆಯ ನಡುವೆ ಮೊದಲೇ ಮಾತು ಕತೆ ಆಗಿತ್ತು ಎಂದರೆ ಸರಿಯಲ್ಲ. ದಾವಾದ 1ನೇ ಸ್ವತ್ತು 485/3ರಲ್ಲಿ 1 ಎಕರೆ 27 ½ ಗುಂಟೆ ಸೌಭಾಗ್ಯ ರವರಿಗೆ ಸೇರಿದೆ ಎಂದರೆ ಸರಿಯಲ್ಲ. ಈಗ ಹೇಳಿದ ಸರ್ವೆ ನಂಬರ್ ನಲ್ಲಿ 1 ಎಕರೆ 5 ಗುಂಟೆ ಮಾತ್ರ ನಮ್ಮ ಕುಟುಂಬಕ್ಕೆ ಸೇರಿದ್ದು ಎಂದರೆ ಸರಿಯಲ್ಲ. ಮೂರು ಜನಕ್ಕೂ ತಲಾ 15 ಗುಂಟೆಯಂತೆ ಮಾತುಕತೆ ಆಗಿತ್ತು ಎಂದರೆ ಸರಿಯಲ್ಲ. ದಿಃ 05.10.2021ರಂದು ಸರ್ವೆ ಇಲಾಖೆಯಿಂದ ವಿಭಾಗ ಪತ್ರದ ನೋಂದಣಿಗಾಗಿ 11E ಸ್ಕೇಚ್‌ನ್ನು ಪಡೆದಿದ್ದೇನೆ ಎಂದರೆ ಸರಿಯಲ್ಲ. ವಿಭಾಗಕ್ಕೆ ನಾನು ಬಂದಿಲ್ಲ ಎಂದರೆ ಸರಿಯಲ್ಲ. ನಮ್ಮನ್ನು ಕರೆದಿಲ್ಲ ಎಂದು ಹೇಳುತ್ತಾರೆ. ನಾನು ಕೂಲಿ ಕೆಲಸಕ್ಕೆ ಹೋಗುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾದ ಐಟಂ ನಂಬರ್ ಸರ್ವೆ ನಂಬರ್ 170/1A/1ರಲ್ಲಿ 13 ಗುಂಟೆ ಜಮೀನನ್ನು ನನ್ನ ತಂದೆ ಮುಷ್ತಾಹಿದ್ ರವರಿಗೆ ಕುಟುಂಬದ ಅವಶ್ಯಕತೆಗಾಗಿ ಮಾರಾಟ ಮಾಡಲು ಒಪ್ಪಿಕ್ರಯದ ಕರಾರು ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಮುಷ್ತಾಹಿದ್ ರವರು ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ದಾವಾ ಹಾಕಿದ್ದಾರೆ ಎನ್ನುವುದು ಗೊತ್ತಿಲ್ಲ. ಮುಷ್ತಾಹಿದ್ ರವರು 13 ಗುಂಟೆ ಜಮೀನಿನಲ್ಲಿ ಗಣಿಗಾರಿಕೆ ಮಾಡುತ್ತಿದ್ದಾರೆ. ಸರ್ವೆ ನಂಬರ್ 58/16 ನನ್ನ ತಾಯಿ ರಾಜಮ್ಮರವರ ಹೆಸರಿನಲ್ಲಿದೆ. ನನ್ನ ತಾಯಿ ದಿಃ 27.06.2015ರಂದು ನೋಂದಾಯಿತ ಕ್ರಯ ಪತ್ರದ ಮುಖಾಂತರ ಆಸ್ತಿಯನ್ನು ಖರೀದಿ ಮಾಡಿದರು ಎನ್ನುವುದು ನಿಜ. ಸದರಿ ಆಸ್ತಿ ನನ್ನ ತಾಯಿಯ ಸ್ವಯಾರ್ಜಿತ ಆಸ್ತಿ

ಆಗಿದ್ದರಿಂದ ನಮಗೆ ಯಾರಿಗೂ ಭಾಗ ಇಲ್ಲ ಎಂದರೆ ಸರಿಯಲ್ಲ, ನಾವು ದುಡ್ಡು ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಹರವೆ ಗ್ರಾಮದಲ್ಲಿ ಜಂಜರ್ ನಂ. 230 ಆಸ್ತಿ ನಂ. 232/1ರಲ್ಲಿ 18X20 ಅಡಿ ಸ್ವತ್ತು ನಮ್ಮೂರಿನಲ್ಲಿದೆ ಎನ್ನುವುದು ನಿಜ. ಆ ಖಾತೆ ನನ್ನ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಇದು ಕೂಡ ಪಿತ್ರಾರ್ಜಿತ ಆಸ್ತಿ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಹೇಳುತ್ತಾರೆ ಸೇರಿಸಿದ್ದೇನೆ. ಈ ಆಸ್ತಿ ನನ್ನ ಹೆಸರಿನಲ್ಲಿರುವುದರಿಂದ ದುರುದ್ದೇಶದಿಂದ ಸೇರಿಸಿಲ್ಲ ಎಂದರೆ ಸರಿಯಲ್ಲ. ದಾವಾದ 1ನೇ ಆಸ್ತಿಯನ್ನು ವಿಭಾಗ ಮಾಡಿಕೊಳ್ಳಲು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದ್ದಾಗ ನಾನು ಉದ್ದೇಶಪೂರ್ವಕವಾಗಿ ವಿಭಾಗ ಪತ್ರ ನೋಂದಾಯಿಸಲು ಹೋಗದೇ ಈ ದಾವೆ ಹಾಕಿ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ಅದಕ್ಕಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ** : ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ., ಚಾಮರಾಜನಗರ.